








**1** ದೆಹಲಿಯ ನೆಮ್ಮದಿಯ ಇರುಳಿಗೆ ಕೊಳ್ಳಿಯಿಟ್ಟಂತೆ ಕಾಣಿಸುವ, ವಸತಿಗೃಹಗಳ ಕತ್ತಲೊಂದಿಗೆ ರುದ್ರಭೂಮಿಯ ಚಿತೆಗಳ ಬೆಳಕನ್ನೂ ಒಟ್ಟಿಗೆ ಹಿಡಿದಿಟ್ಟಿರುವ ಸಿದ್ದಕಿ ಅವರ ಚಿತ್ರ.

**2** ರೊಹಿಂಗ್ಯಾ ವಲಸೆ ಹೆಣ್ಣುಮಗಳು ಏನನ್ನೋ ಹುಡುಕುತ್ತಿರುವಂತೆ ಸಮುದ್ರ ತೀರವನ್ನು ಸ್ಪರ್ಶಿಸುತ್ತಿರುವ ಈ ಚಿತ್ರ ಏನೆಲ್ಲ ಕಥೆಗಳನ್ನು ಹೇಳುವಂತಿದೆ.

**3** ಹೊಸ ಪೌರತ್ವ ಮಸೂದೆಗೆ ಸಂಬಂಧಿಸಿದಂತೆ ದೆಹಲಿಯಲ್ಲಿ ನಡೆದ ಗಲಭೆಯಲ್ಲಿ ಗುಂಪೊಂದು ವ್ಯಕ್ತಿಯ ಮೇಲೆ ಹಲ್ಲೆ ನಡೆಸುತ್ತಿರುವುದು (ಫೆ. 24, 2020)

ನೋಟಗಳು (ಈ ಚಿತ್ರಗಳಿಗೂ ಪುಲಿಟ್ಜರ್ ಪ್ರಶಸ್ತಿ ಬಂದಿತ್ತು) ಜಗತ್ತಿನ ಅಂತಃಕರಣವನ್ನೇ ಕಲಕಿದವು. ಹಾಂಗ್‌ಕಾಂಗ್, ಬಾಂಗ್ಲಾದೇಶ, ಶ್ರೀಲಂಕಾ, ಅಫ್ಘಾನಿಸ್ತಾನ ಹೀಗೆ ಹಲವು ದೇಶಗಳನ್ನು ಅವರು ಸುತ್ತಿದರು. ಯೂರೋಪಿನಲ್ಲೂ ಸಾಹಸ ಮೆರೆದರು. ಯಾರಿಗೆ ಗೊತ್ತು? ಈಗ ಅವರು ಬದುಕಿದ್ದರೆ ಉಕ್ರೇನ್‌ನಲ್ಲಿ ಇರುತ್ತಿದ್ದರೇನೋ!

ಭಾರತದಲ್ಲಿ ಕೋವಿಡ್‌ನ ಬಿಂಬಗಳನ್ನು ಅವರು ಸೆರೆ ಹಿಡಿಯುತ್ತಿದ್ದ ರೀತಿಗೆ ವಿಪರೀತ ಎನಿಸುವಷ್ಟು ದ್ವೇಷವನ್ನು ಎದುರಿಸಬೇಕಾಯಿತು. ಟ್ವಿಟರ್ ಅಂತೂ ಪ್ರೀತಿ ಮತ್ತು ದ್ವೇಷದ ಹೊಳೆಯನ್ನೇ ಅವರತ್ತ ಹರಿಸಿಕೊಂಡು ಬಂತು. ದೇಶದಾದ್ಯಂತ ಕೋವಿಡ್‌ನ ತೀವ್ರತೆ ಹೆಚ್ಚಾಗಿದ್ದ ಸಂದರ್ಭದಲ್ಲಿ ಆರೋಗ್ಯದ ಬಗೆಗಿನ ಎಲ್ಲ ಭಯ–ಆತಂಕಗಳನ್ನು ಅಲಕ್ಷಿಸಿ, ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಮಾನವೀಯ ಬಿಂಬಗಳಿಗಾಗಿ ಕಾದು ಕುಳಿತ ವ್ಯಕ್ತಿ ಅವರಾಗಿದ್ದರು. ಆಸ್ಪತ್ರೆಗಳು, ಶವಾಗಾರಗಳು, ಸ್ಮಶಾನಗಳು, ಹಾದಿ–ಬೀದಿಗಳು, ಆರೈಕೆ ಕೇಂದ್ರಗಳು, ರೈಲು ನಿಲ್ದಾಣಗಳು, ಕಾರ್ಮಿಕರ ಹಳ್ಳಿಗಳು... ಹೀಗೆ ಯಾವುದನ್ನೂ ಬಿಡದಂತೆ ಅವರು ಸುತ್ತಿದರು. ‘ಮನೆಯಲ್ಲಿ ನಾವು ವಯಸ್ಸಾದ ತಂದೆ–ತಾಯಿಗಳಲ್ಲದೆ ಇಬ್ಬರು ಪುಟ್ಟ ಮಕ್ಕಳೂ ಇದ್ದರು. ಹೀಗಾಗಿ ಕೋವಿಡ್ ಸಮಯದಲ್ಲಿ ಫೋಟೊ ತೆಗೆದು ಮನೆಗೆ ಬಂದಾಗ ಆತ ಪ್ರತ್ಯೇಕವಾಸದಲ್ಲಿ ಇರುತ್ತಿದ್ದ. ಅವನ ಸಮಾಜದ ಮೇಲಿನ ಪ್ರೀತಿ ಮತ್ತು ಕುಟುಂಬದ ಮೇಲಿನ ಕಾಳಜಿ ಪ್ರಶ್ನಾತೀತವಾಗಿತ್ತು’ ಎಂದು ಅವರ ತಂದೆ ನೆನೆಯುವುದುಂಟು.

ಧೈರ್ಯ ಹಾಗೂ ಸ್ವಾತಂತ್ರ್ಯದ ಮನೋಭಾವದ ದಾನಿಶ್, ಹಿಂಸಾಚಾರಗಳು ನಡೆದಾಗ, ಅದು ಯಾವುದೇ ಪ್ರದೇಶದಲ್ಲಿ ಸಂಭವಿಸಿರಲಿ, ಯಾವ ಅಪಾಯವನ್ನೂ ಲೆಕ್ಕಿಸದೆ ಒಳನುಗ್ಗಿ ಫೋಟೊ ಕ್ಲಿಕ್ಕಿಸುತ್ತಿದ್ದರು. ಮಾನವೀಯತೆಯ ಅಪ್ರತಿಮ ಕ್ಷಣಗಳನ್ನೋ ದಾರುಣ ಸನ್ನಿವೇಶಗಳನ್ನೋ ತಮ್ಮ ಫ್ರೇಮ್‌ಗಳಲ್ಲಿ ಸೆರೆಹಿಡಿದ ಮಾತ್ರಕ್ಕೆ ದಾನಿಶ್ ವಿರಮಿಸುತ್ತಿರಲಿಲ್ಲ. ತಮ್ಮ ಬಿಂಬಗಳಲ್ಲಿ ಸೆರೆಯಾದ ವ್ಯಕ್ತಿಗಳನ್ನು ಚೌಕಟ್ಟಿನ ಆಚೆಗೂ ಅವರು ಹುಡುಕಿಕೊಂಡು ಹೋಗುತ್ತಿದ್ದರು. ದೆಹಲಿಯಿಂದ ಊರಿಗೆ ನಡೆದುಕೊಂಡು ಹೋದ ವಲಸೆ ಕಾರ್ಮಿಕ ದಯಾರಾಮ್, ಬುಂದೇಲ್‌ಖಂಡದ ತನ್ನ ಹಳ್ಳಿಗೆ ಸುರಕ್ಷಿತವಾಗಿ ತಲುಪಿರುವುದನ್ನು ಆ ಹಳ್ಳಿಗೆ ತಾವೂ ಭೇಟಿಕೊಟ್ಟು ಖಚಿತಪಡಿಸಿಕೊಂಡಿದ್ದರು.

‘ಮಾನವೀಯ ಸಂಘರ್ಷದ ‘ಐಕಾನಿಕ್ ಫೋಟೊ’ಗಳನ್ನು ಸೆರೆ ಹಿಡಿಯುವುದು ಅವನಿಗೆ ಎಷ್ಟು ಮುಖ್ಯವಾಗಿತ್ತೋ ಬಿಕ್ಕಟ್ಟಿನಲ್ಲಿ ಸಿಕ್ಕ ವ್ಯಕ್ತಿಗೆ ಸಾಧ್ಯವಿರುವ ಎಲ್ಲ ನೆರವು ನೀಡುವುದು ಅಷ್ಟೇ ಮಹತ್ವದ್ದಾಗಿತ್ತು. ಹೀಗಾಗಿ ಆತ ಅಪಾಯ ಲೆಕ್ಕಿಸದೆ ಧೈರ್ಯದಿಂದ ಮುನ್ನುಗ್ಗುತ್ತಿದ್ದ’ ಎಂದು ಅವರ ಗೆಳತಿಯಾಗಿದ್ದ ಸಲ್ಮಾ ಸಿದ್ದಕಿ ನೆನೆಯುತ್ತಾರೆ. ಆದ್ದರಿಂದಲೇ ದಾನಿಶ್ ಇತರ ಫೋಟೊ ಜರ್ನಲಿಸ್ಟ್‌ಗಳಿಗಿಂತ ಭಿನ್ನವಾಗಿದ್ದರು. ಹೌದು, ಅವರು ಎಂತಹ ಅಪ್ಪಟ ಚಿನ್ನವಾಗಿದ್ದರು ಎಂಬುದಕ್ಕೆ ಇದೀಗ ಎರಡನೇ ಬಾರಿ ಒಲಿದು ಬಂದಿರುವ ಪುಲಿಟ್ಜರ್ ಪ್ರಶಸ್ತಿಯೇ ಸಾಕ್ಷ್ಯ ನುಡಿಯುತ್ತದೆ.

ಪ್ರತಿಕ್ರಿಯಿಸಿ: feedback@sudha.co.in